**M.V.C.No. 900/2024**
**PW1**

ದಿನಾಂಕ 25.02.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ 2ನೇ  ಎದುರುದಾರರ ಪರ ಶ್ರೀ ಎಸ್.ಪಿ.ಕೆ ವಕೀಲರಿಂದಃ

ಅಪಘಾತದ ಸಮಯದಲ್ಲಿ ನನಗೆ ಚಾಲನಾ ಪರವಾನಿಗೆ ಇರಲಿಲ್ಲ. ಬೈಕ್ ಕೀರ್ತಿ ಪ್ರಸಾದ್ ರವರಿಗೆ ಸೇರಿದ್ದು, ಅವರ ಬೈಕಿನಲ್ಲಿ ನಾನು ಹಿಂದೆ ಕುಳಿತಿದ್ದೆ. ಸದರಿ ಬೈಕ್ ನಂಬರ್ ನನಗೆ ನೆನಪಿಲ್ಲ. ಅಪಘಾತ ಮಾಡಿದ ಬೈಕ್ ನಂಬರ್ ಸಹ ನನಗೆ ಗೊತ್ತಿಲ್ಲ. ಕೀರ್ತಿ ಪ್ರಸಾದ್ ರವರು ಹೋಟೇಲ್ ಗೆ ಹೋಗುವ ಸಲುವಾಗಿ ತಿರುಗಿಸಿದಾಗ ಎದುರುಗಡೆಯಿಂದ ಮತ್ತೊಂದು ಬೈಕ್ ಬಂದು ಕೀರ್ತಿಪ್ರಸಾದ್ ರವರ ಬೈಕ್ ಗೆ ಡಿಕ್ಕಿ ಮಾಡಿರುತ್ತದೆ. ಕೀರ್ತಿಪ್ರಸಾದ್ ರವರು ತಮ್ಮ ಬೈಕಿಗೆ ಇಂಡಿಕೇಟರ್ ಹಾಕಿ ನಿಧಾನವಾಗಿ ತಿರುಗಿಸಿರುತ್ತಾರೆ ಎಂದರೆ ಸರಿ. ಅಪಘಾತದಲ್ಲಿ ನನ್ನ ಎಡಗಾಲಿಗೆ ಪೆಟ್ಟಾಗಿರುತ್ತದೆ.

ಕೀರ್ತಿಪ್ರಸಾದ್ ರವರಿಗೆ ಪೆಟ್ಟಾದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಕೆಳಗೆ ಬಿದ್ದಾದ ನಂತರ ನನಗೆ ಅಪಘಾತವಾಗಿರುವ ಬಗ್ಗೆ ಗೊತ್ತಾಗಿರುತ್ತದೆ. ಅಪಘಾತವಾದ ನಂತರ ಬೈಕುಗಳು ಅಲ್ಲೇ ಇದ್ದವು. ಎದುರಿನ ಬೈಕ್ ಚಾಲಕನಿಗೆ ಗಾಯಗಳಾದ ಬಗ್ಗೆ ನನಗೆ ಗೊತ್ತಿಲ್ಲ. ಎರಡೂ ಬೈಕುಗಳೂ ಸಹ ಡಾಂಬಾರು ರಸ್ತೆಯಲ್ಲಿ ಬಿದ್ದುಕೊಂಡಿದ್ದವು. ಡಾಂಬಾರು ರಸ್ತೆಯ ಮೇಲೆ ಬೈಕುಗಳು ಬಿದ್ದಾಗ ಸಾಮಾನ್ಯವಾಗಿ ಅವುಗಳಿಗೆ ಡ್ಯಾಮೇಜಾಗುತ್ತದೆ ಎಂದರೆ ಸರಿ.

ಅಪಘಾತವಾದ ನಂತರ ನಾನು ಮೊದಲ ಬಾರಿಗೆ ಸುಳ್ಯ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ಅಪಘಾತ ಹೇಗಾಯಿತು ಎಂದು ಕೇಳಿ ಬರೆದುಕೊಂಡಿರುತ್ತಾರೆ. ನಾನು ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನಾನು 4ನೇ ದಿನ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿರುತ್ತೇನೆ. ಅಪಘಾತದ ಕುರಿತು ನಾನು ಅಥವಾ ನಮ್ಮ ಕಡೆಯವರು ದೂರು ನೀಡಿರುವುದಿಲ್ಲ. ನನಗೆ ಆಪರೇಷನ್ ಆಗಿದ್ದ ಕಾರಣಕ್ಕೆ ಆ ರೀತಿ ದೂರು ನೀಡಿರುವುದಿಲ್ಲ. ಆಸ್ಪತ್ರೆಯಲ್ಲಿ ನನ್ನ ಹೆಂಡತಿ ನನ್ನನ್ನು ನೋಡಿಕೊಳ್ಳುತ್ತಿದ್ದಳು. ಅಪಘಾತವಾದ ನಂತರ ಬೈಕಿನವರು ರಾಜಿ ಮಾಡಿಕೊಂಡ ವಿಚಾರ ನನಗೆ ಗೊತ್ತಿಲ್ಲ. ಆ ಪ್ರಕಾರ ನಾನು ಯಾವುದೇ ಪರಿಹಾರ ಬೇಡ ಎಂದು ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಒಂದು ತಿಂಗಳ ನಂತರ ನಾನು ವಕೀಲರ ಮೂಲಕ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಆಗ ನಾನು ಪೊಲೀಸರಿಗೆ ಕಂಪ್ಲೆಂಟ್ ಕೊಟ್ಟಿದ್ದು, ಪೊಲೀಸರು ಎಫ್.ಐ.ಆರ್ ಮಾಡಲು ಆಗುವುದಿಲ್ಲ ಎಂದು ಹೇಳಿರುತ್ತಾರೆ. ಪೊಲೀಸರು ಹಿಂಬರಹ ನೀಡಿರುವುದಿಲ್ಲ. ಪೊಲೀಸರು ಎಫ್.ಐ.ಆರ್ ಮಾಡದೇ ಇರುವುದಕ್ಕೆ ನಾನು ಮೇಲಾಧಿಕಾರಿಗಳಿಗೆ ದೂರು ನೀಡಿರುವುದಿಲ್ಲ. ನಾನು ಪೊಲೀಸರಿಗೆ ನೀಡಿದ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಎಫ್.ಐ.ಆರ್ ಮಾಡದೇ ಇರುವ ಕಾರಣಕ್ಕೆ ಪೊಲೀಸರಿಗೆ ವಕೀಲರ ಮೂಲಕ ನೋಟೀಸು ಕೊಟ್ಟಿರುತ್ತೇನೆ. ಸದರಿ ನೋಟೀಸಿಗೆ

ಪೊಲೀಸರಿಂದ ಉತ್ತರ ಬಂದಿರುವುದಿಲ್ಲ. ಸದರಿ ನೋಟೀಸಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ಆ ತಿಂಗಳ ನಂತರ ಅಪಘಾತದ ಕುರಿತು ನ್ಯಾಯಾಲಯದಲ್ಲಿ ಕೀರ್ತಿಪ್ರಸಾದ್ ರವರ ವಿರುದ್ಧ ಖಾಸಗಿ ದೂರು ಸಲ್ಲಿಸಿರುತ್ತೇನೆ. ಬೈಕನ್ನು ಕೀರ್ತಿ ಪ್ರಸಾದ್ ರವರು ಚಾಲನೆ ಮಾಡುತ್ತಿದ್ದರು. ಅಪಘಾತದ ಕುರಿತು ಮೊದಲು ವಾಣಿ ಪ್ರಸಾದ್ ರವರ ವಿರುದ್ಧ ದೂರು ದಾಖಲು ಮಾಡಿದ್ದು, ನಂತರ ಕೀರ್ತಿ ಪ್ರಸಾದ್ ರವರ ತಪ್ಪಿನಿಂದ ಅಪಘಾತವಾಗಿದೆ ಎಂದು ತಿಳಿದುಬಂದಿರುತ್ತದೆ. ವಾಣಿ ಪ್ರಸಾದ್ ರವರು ಮತ್ತೊಂದು ಬೈಕಿನ ಚಾಲಕರಾಗಿರುತ್ತಾರೆ. ಅಪಘಾತದಲ್ಲಿ ಎರಡು ಬೈಕುಗಳು ಭಾಗಿಯಾಗಿರುತ್ತದೆ. ವಾಣಿ ಪ್ರಸಾದ್ ರವರ ಬೈಕಿಗೆ ದಾಖಲೆಗಳು ಇಲ್ಲ ಎಂಬ ಕಾರಣದಿಂದ ನಾನು ಕೀರ್ತಿಪ್ರಸಾದ್ ರವರ ವಿರುದ್ಧ ದೂರು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕೀರ್ತಿ ಪ್ರಸಾದ್ ರವರ ವಿರುದ್ಧ ನ್ಯಾಯಾಲಯದಲ್ಲಿ ದೂರು ದಾಖಲು ಮಾಡಿರುತ್ತೇನೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಕೀರ್ತಿಪ್ರಸಾದ್ ರವರ ತಪ್ಪಿನಿಂದ ಅಪಘಾತವಾಗಿರುತ್ತದೆ. ನನಗೆ ಅಪಘಾತದಿಂದ ಗಾಯಗಳಾಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಕಾರಣಕ್ಕೆ ತಕ್ಷಣಕ್ಕೆ ದೂರು ದಾಖಲು ಮಾಡಿರುವುದಿಲ್ಲ. ನಾನು ಪ್ರಮಾಣಪತ್ರದಲ್ಲಿ ಹೇಳಿದ ಹಾಗೆ 1ನೇ ಎದುರುದಾರರ ವಿರುದ್ಧ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರರನ್ನು ನನಗೆ ನೋಡಿ ಪರಿಚಯವಿದೆ. ಅಪಘಾತಕ್ಕೆ ಮೊದಲು ಅವರ ಪರಿಚಯ ಇರಲಿಲ್ಲ. 1ನೇ ಎದುರುದಾರರು ಎಲ್ಲಿ ಕೆಲಸ ಮಾಡುತ್ತಾರೆ ನನಗೆ ಗೊತ್ತಿಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಆಗಿರುವ ಗಾಯಗಳಿಗೂ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಅಪಘಾತ ಸಮಯದಲ್ಲಿ ನಾನು ಬಿಲ್ಡಿಂಗ್ ಕೆಲಸದಲ್ಲಿ ಹೆಲ್ಪರ್ ಆಗಿ ಕೆಲಸ ಮಾಡುತ್ತಿದ್ದೆ. ಅಪಘಾತದ ದಿನ ನಾನು ಯಾರಲ್ಲಿ ಕೆಲಸ ಮಾಡುತ್ತಿದ್ದೆ ಎಂದು ಈಗ

ನನಗೆ ನೆನಪಿಲ್ಲ. ನಾನು ಬಿಲ್ಡಿಂಗ್ ಕೆಲಸ ಮಾಡುವಾಗ ಬಿದ್ದು ಮಾಡಿಕೊಂಡ ಗಾಯವನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ವಾಹನಗಳು ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ಈಗ ನನಗೆ ಕೆಲಸ ಮಾಡಲು ಆಗುವುದಿಲ್ಲ. ನನ್ನ ಬಳಿ ಕಾರ್ಮಿಕರ ಕಾರ್ಡು ಇರುತ್ತದೆ. ಅದು ಈಗಲೂ ಸಹ ಇದೆ. ಅದನ್ನು ನಾನು 2025ರ ನಂತರ ನವೀಕರಣ ಮಾಡಿಸಿರುವುದಿಲ್ಲ. ಅಪಘಾತದಲ್ಲಿ ನನಗೆ ಆದ ಗಾಯಗಳಿಗೆ ಯಾವುದೇ ಅಂಗನ್ಯೂನತೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ವೈದ್ಯಕೀಯ ವೆಚ್ಚ ಪಾವತಿ ರಶೀದಿಗಳಿಗೂ ಈ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಕಟ್ಟಡ ಕೆಲಸ ಮಾಡುತ್ತಿದ್ದ ಬಗ್ಗೆ ಅದರಿಂದ ನನಗೆ ಅದಾಯ ಇದ್ದ ಬಗ್ಗೆ ನಾನು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. 2ನೇ ಎದುರುದಾರರು ನನಗೆ ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ, ಸುಳ್ಯ